ದಿನಾಂಕಃ 04-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ  ಶ್ರೀ ಎನ್ ಎಸ್ ಪಿ ವಕೀಲರಿಂದ**

ಸರ್ವೇ ನಂ. 332/2 ರ ಮೂರು ಕೈಬರಹ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-7 ರಿಂದ ನಿಪಿ-9 ಎಂದು,  ಸರ್ವೇ ನಂ.332/2, 331/4 ಅ, 331/4 ಬ ಹಾಗೂ 331/5 ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-10 ರಿಂದ ನಿಪಿ-13 ಎಂದು ಗುರುತಿಸಲಾಯಿತು. ಹಕ್ಕು ಬದಲಾವಣೆ ಸಂಖ್ಯೆ 5832, 6736 ಇವುಗಳ ಧೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-14 ಮತ್ತು ನಿಪಿ-15 ಎಂದು ಗುರುತಿಸಲಾಯಿತು. ಎಂ ಆರ್ ನಂ. 159 ಹಾಗೂ 57 ರ ಮೂಲ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-16 ಮತ್ತು ನಿಪಿ-17 ಎಂದು ಗುರುತಿಸಲಾಯಿತು. ದಿಃ 02.11.2011 ಹಾಗೂ ದಿಃ 16.02.2022 ರ ಖರೀದಿ ಪತ್ರ ಹಾಗೂ ಖರೀದಿ ದುರಸ್ಥಿ ಪತ್ರದ ಮೂಲ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-18 ಮತ್ತು ನಿಪಿ-19 ಎಂದು ಗುರುತಿಸಲಾಯಿತು. ಪೀಟಿ ಶೀಟ್ ಮತ್ತು ಆಕಾರಬಂಧ ಇವುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-20 ಮತ್ತು ನಿಪಿ-21 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲು ಪ್ರಾರ್ಥಿಸುತ್ತೇನೆ.

**ಪಾಟೀಸವಾಲುಃ-** ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).